ಆ) ದಿನಾಂಕ ೪-೧೨-೮೬ರಂದು ಬೆಳಿಗಿನ ಜಾವ ೪ ಗಂಟೆಗೆ ಸೂರ್ಯ ಆಫ್‌ಸೆಟ್ ಮುದ್ರಣಾಲಯವನ್ನು ಕೆ.ಜಿ.ಎಫ್.ನ ಪೋಲೀಸ್ ಸೂಪರಿಂಟೆಂಡೆಂಟ್ ಶೋಧಿಸಿದಾಗ ೧೦೦ ರೂ.ನ ಖೋಟಾ ನೋಟುಗಳನ್ನು ಮುದ್ರಿಸುತ್ತಿದ್ದುದು ಕಂಡು ಬಂದಿತು. ಪೋಲೀಸಿನವರು ಆಲ್ಲಿದ್ದ ಉಪಕರಣ ಯಂತ್ರಗಳನ್ನು ಹಾಗೂ ೬೪೦ ಅರ್ಧ ಮುದ್ರಿತವಾದ ಹಾಳೆಗಳನ್ನು ವಶಪಡಿಸಿಕೊಂಡಿದ್ದಾರೆ.

ಇ) ಆಂಡರ್‌ಸನ್ ಪೇಟೆಯ ಪೋಲೀಸ್ ಠಾಣೆಯಲ್ಲಿ ಭಾರತ ದಂಡ ಸಂಹಿತೆಯ ಕಲಂ ೪೮೯ (ಡಿ)ರನ್ವಯ ಗುನ್ನೆ ನಂ. ೧೫೨/೮೬ ಅನ್ನು ದಾಖಲು ಮಾಡಿಕೊಂಡಿದ್ದಾರೆ. ಈ ಪ್ರಕರಣದಲ್ಲಿ ಟಿ ಆರ್ಮುಗಂ, ಸುರಿಯಪ್ಪನ್ ಅಲಿಯಾಸ್ ಮರಿ, ಪಿ. ಶೇಖರ್ ಮತ್ತು ಪಿ. ರಮೇಶ್ ಎಂಬುವರನ್ನು ಬಂಧಿಸಲಾಗಿದೆ. ಶಿವಕಾಸಿಯ ರಾಮಕೃಷ್ಣ, ಶಾಕರ್, ಶೇಖರ್ ಮತ್ತು ಕೃಷ್ಣ ಅವರನ್ನು ಹುಡುಕಲು ಎಲ್ಲಾ ಪ್ರಯತ್ನ ಮಾಡಲಾಗುತ್ತಿದೆ. ಈ ಪ್ರಕರಣವನ್ನು ತನಿಖೆಗಾಗಿ ಸಿ.ಒ.ಡಿ.ಗೆ ವಹಿಸಲಾಗಿದೆ.

ಈ) ಈ ಪ್ರಕರಣವನ್ನು ಸಿ.ಒ.ಡಿ. ತನಿಖೆ ಮಾಡುತ್ತಿರುವುದರಿಂದ ಸಿ.ಬಿ.ಐ.ಗೆ ವಹಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಟಿ.ಎಸ್. ಮಣಿ.—ಬೆಂಗಳೂರಿನಲ್ಲಿ ಈ ತರಹದ ಕೇಸು ಬಂದಿದೆ. ಹುಬ್ಬಳ್ಳಿಯಲ್ಲಿ ಬಂದಿದೆ. ಕೆ.ಜಿ.ಎಫ್‌ನಲ್ಲೂ ಕೂಡ ಬಂದಿದೆ. ಸಿ.ಓ.ಡಿ.ಯವರು ಸರಿಯಾಗಿ ಕೆಲಸ ಮಾಡಲಿಲ್ಲ ಎಂದು ಇದರಿಂದ ಅರ್ಥವಾಗುತ್ತದೆ. ಆದ್ದರಿಂದ ಇದನ್ನು ಸಿ.ಬಿ.ಐ.ಗೆ ಒಪ್ಪಿಸಿದರೆ ನಿಜವಾದ ಫ್ಯಾಕ್ಟ್ಸ್ ಹೊರಗೆ ಬರಬಹುದು ಎಂಬ ಉದ್ದೇಶದಿಂದ ಕೇಳುತ್ತಿದ್ದೇನೆ. ಇದನ್ನು ಸರ್ಕಾರ ಕನ್ಸಿಡರ್ ಮಾಡುತ್ತದೆಯೇ.

ಶ್ರೀ ಬಿ. ರಾಚಯ್ಯ.—ಮಾನ್ಯ ಸದಸ್ಯರು ಈಗ ಕೇಳಿರುವ ಪ್ರಶ್ನೆ ಕೆ.ಜಿ.ಎಫ್.ಗೆ ಸಂಬಂಧಪಟ್ಟಿದ್ದು. ನಮ್ಮ ಅಧಿಕಾರಿಗಳು ಇನಿಷ್ಟಿಯೇಷನ್ ತೆಗೆದುಕೊಂಡು ಅದನ್ನು ಕಂಡು ಹಿಡಿದಿದ್ದಾರೆ. ನಾಸಿಕ್‌ಗೆ ಹೋಗಿ ಕೌಂಟರ್‌ಫೀಟ್ ಕರೆನ್ಸಿಯ ಮುದ್ರಣವನ್ನು ಕಂಡು ಹಿಡಿಯುವ ವಿಷಯದಲ್ಲಿ ತರಬೇತಿಯನ್ನು ಪಡೆದುಕೊಂಡು ಬಂದಿದ್ದಾರೆ ಆ ಕ್ರೆಡಿಟ್ ನಮಗೆ ಬರಬೇಕಾಗುತ್ತದೆ. ನಮ್ಮ ಪಕ್ಕದ ರಾಜ್ಯವಾಗಿರತಕ್ಕ ತಮಿಳುನಾಡಿನಲ್ಲಿರತಕ್ಕ ಅಧಿಕಾರಿಗಳು ಇವರಿಗೆ ಸಹಾಯ ಮಾಡಿರುವುದರಿಂದ ಈ ಕೇಸನ್ನು ಸಿ.ಬಿ.ಐ.ಗೆ ಒಪ್ಪಿಸುವಂತಹ ಅವಕಾಶ ಇಲ್ಲ. ಆದರೆ ಸಿ.ಬಿ.ಐ.ನವರು ಸುಮ್ಮೋ ಮೋಟೋ ಎಲ್ಲಿ ಬೇಕಾದರೂ ಇಂಥವರನ್ನು ಹಿಡಿಯಬಹುದು.

ಶ್ರೀ ಆರ್, ವೆಂಕಟರಾಮಯ್ಯ.—ಶ್ರೀಮಾನ್ ನಾರಾಯಣ್‌ಕುಮಾರ್‌ರವರು ಶ್ರೀಮಾನ್ ಬಸವಲಿಂಗಪ್ಪನವರನ್ನು †ಏನನ್ನುವ ಮಾತನ್ನು ಹೇಳಿದರು. ಅದು ಕಡತದಲ್ಲಿ ಹೋಗಿದೆ. ಆ ಪದವನ್ನು ಕಡತದಿಂದ ತೆಗೆದುಹಾಕಬೇಕು.

ಅಧ್ಯಕ್ಷರು.—ಆಯಿತು ನೋಡುತ್ತೇನೆ.

† ಅಧ್ಯಕ್ಷರ ಅನುಮತಿಯಂತೆ ತೆಗೆದುಹಾಕಲಾಗಿದೆ.

ರಾಜ್ಯದಲ್ಲಿ ನಡೆದ ದರೋಡೆ ಹಾಗೂ ಕಳ್ಳತನಗಳು

ಸಂಖ್ಯೆ ೧೪೪ (೪೭ ಬಿ) ಶ್ರೀ ಗೋಪಾಲ ಮುಕುಂದ ಕಾನಡೆ(ಸಿಸಿ).—ಮಾನ್ಯ ಗೃಹಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ೧೯೮೫-೮೬ನೇ ಸಾಲಿನಲ್ಲಿ ರಾಜ್ಯದಲ್ಲಿ ನಡೆದ ದರೋಡೆ ಹಾಗೂ ಲೂಟಿ ಅಪಹರಣಗಳ ಸಂಖ್ಯೆ ಎಷ್ಟು ?

ಆ) ಆ ಪೈಕಿ ಎಷ್ಟು ಪ್ರಕರಣಗಳನ್ನು ದಾಖಲು ಮಾಡಿಕೊಳ್ಳಲಾಗಿದೆ.

ಇ) ದರೋಡೆಯಿಂದ ಹಾನಿ ಹಾಗೂ ನಷ್ಟ ಹೊಂದಿದವರಿಗೆ ನೀಡಿದ ಪರಿಹಾರವೇನು ?

ಈ) ಎಷ್ಟು ಮಂದಿ ದರೋಡೆಕೋರರನ್ನು ಹಿಡಿದು ಶಿಕ್ಷೆ ವಿಧಿಸಲಾಗಿದೆ ಹಾಗೂ ದರೋಡೆ ಲೂಟಿತನಗಳನ್ನು ತಡೆಗಟ್ಟಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಬಿ. ರಾಚಯ್ಯ (ಗೃಹ ಮಂತ್ರಿಗಳು)—

ಅ) ವರದಿಯಾದ ಎಲ್ಲಾ ಪ್ರಕರಣಗಳನ್ನು ದಾಖಲೆ ಮಾಡಿಕೊಳ್ಳಲಾಗಿದೆ. ವಿವರಗಳು ಕೆಳಕಂಡಂತಿವೆ:

	೧೯೮೫	೧೯೮೬
ದರೋಡೆಗಳು	೧೫೯	೧೮೧
ಲೂಟಿ ಅಪಹರಣಗಳು	೩೯೫	೨೧೮

ಇ) ಇಂತಹ ಪ್ರಕರಣಗಳಲ್ಲಿ ಪರಿಹಾರ ಕೊಡಲು ನಿಯಮದಲ್ಲಿ ಅವಕಾಶವಿರುವುದಿಲ್ಲ.

ಈ)

	೧೯೮೫	೧೯೮೬
ಬಂಧಿಸಲ್ಪಟ್ಟವರ ಸಂಖ್ಯೆ		
ಅ) ದರೋಡೆ	೧೬೨	೩೦೯
ಆ) ಲೂಟಿ	೧೭೪	೫
ಶಿಕ್ಷೆಗೆ ಒಳಪಡಿಸಿದವರ ಸಂಖ್ಯೆ:		
ಅ) ದರೋಡೆ	೬	೨೬
ಆ) ಲೂಟಿ	೯	೩

ಪೋಲೀಸ್ ಗಸ್ತು ತಿರುಗುವುದನ್ನು ಹೆಚ್ಚಿಸಲಾಗಿದೆ. ನಗರದ ಹೊರವಲಯದಲ್ಲಿ ಗಸ್ತು ತಿರುಗಲು ವಿಶೇಷ ಮೊಬೈಲ್ ದಳಗಳನ್ನು ನೇಮಿಸಲಾಗಿದೆ ಮತ್ತು ಸಿವಿಲ್ ಪೋಲೀಸರಿಗೆ ಸಶಸ್ತ್ರ ಪೋಲೀಸರ ನೆರವನ್ನು ಸಹ ಕೊಡಲಾಗಿದೆ.

ಶ್ರೀ ಜಿ. ಎಂ. ಕಾನಡೆ.—ಮಾನ್ಯ ಅಧ್ಯಕ್ಷರೇ ದರೋಡೆ ಲೂಟಿ ಪ್ರಕರಣಗಳ ಹಾನಿ ಹಾಗೂ ನಷ್ಟಕ್ಕೆ ಒಳಗಾದವರಿಗೆ ಏನಾದರೂ ಪರಿಹಾರ ಕೊಡುತ್ತೀರಾ ಎಂದು ಕೇಳಿದ್ದಕ್ಕೆ ಮಾನ್ಯ ಮಂತ್ರಿಗಳು ಕೊಡಲಿಕ್ಕೆ ಬರುವುದಿಲ್ಲವೆಂದು ಹೇಳುತ್ತಿದ್ದಾರೆ. ಮನೆ ಬೆಂಕಿಯಲ್ಲಿ ಸುಟ್ಟು ಹೋದರೆ ಅಂತಹವರಿಗೆ ೩೦೦ ರೂಪಾಯಿಗಳು ಪರಿಹಾರ ಕೊಡಲಾಗುತ್ತಿದೆ. ಗಾಯಾಳುಗಳಿಗೆ ೨ ಸಾವಿರ ೩ಸಾವಿರ ಪರಿಹಾರ ಕೊಡುತ್ತೀರಿ, ಅದೇ ರೀತಿ ದರೋಡೆ ಪ್ರಕರಣಗಳಲ್ಲಿ ಕೈಕಾಲು ಕಳೆದುಕೊಂಡವರಿಗೆ ಏನಾದರೂ ಪರಿಹಾರ ಕೊಡಲಾಗುತ್ತದೆಯೇ ? ೧೯೮೫ರಲ್ಲಿ ೧೫ ಮಂದಿಗೆ ಶಿಕ್ಷೆ ಮಾಡಲಾಗಿದೆ. ೧೯೮೬ರಲ್ಲಿ ೩೧ ಮಂದಿಗೆ ಶಿಕ್ಷೆ ಮಾಡಲಾಗಿದೆ. ಈ ರೀತಿ ನೀವು ದರೋಡೆ ಮಾಡುವವರಿಗೆ ಶಿಕ್ಷೆ ಕೊಟ್ಟರೆ, ಅವರು ದರೋಡೆಜಾಸ್ತಿ ಮಾಡುತ್ತಾರೆ. ನೀವು ಅಧಿಕಾರಕ್ಕೆ ಬಂದಮೇಲೆ ಪೋಲೀಸರ ಸಂಖ್ಯೆಯನ್ನು ಮತ್ತು ಸಬ್‌ಇನ್ಸ್‌ಪೆಕ್ಟರ್ ಸಂಖ್ಯೆಯನ್ನು ಜಾಸ್ತಿ ಮಾಡಿದ್ದೀರಾ ?

ಶ್ರೀ ಬಿ. ರಾಚಯ್ಯ.—ದರೋಡೆಕೋರರನ್ನು ಒಡಿದು ಶಿಕ್ಷೆ ಮಾಡಿರುವ ವಿಷಯವನ್ನು ಈಗಾಗಲೇ ಹೇಳಿದ್ದೇನೆ. ಹೆಚ್ಚಿನ ರೀತಿಯಲ್ಲಿ ಶಿಕ್ಷೆ ಕೊಡುವುದಕ್ಕೆ ವ್ಯವಸ್ಥೆ ಮಾಡುತ್ತೇವೆ. ಎರಡನೆಯ ಉಪ ಪ್ರಶ್ನೆಗೆ ಪ್ರಶ್ನೆ ಲೂಟಿ ಮತ್ತು ದರೋಡೆ ಪ್ರಕರಣಗಳಲ್ಲಿ ಗಾಯಗೊಂಡವರಿಗೆ ಪರಿಹಾರವನ್ನು ಕೊಡಲಿಕ್ಕೆ ಕಾನೂನಿನಲ್ಲಿ ಅವಕಾಶವಿಲ್ಲ. ದರೋಡೆ ಪ್ರಕರಣಗಳಲ್ಲಿ ಗಾಯಗೊಂಡವರಿಗೆ ಪರಿಹಾರ ಕೊಡಬೇಕೆಂದು ಇಲ್ಲ. ಷೆಡ್ಯೂಲ್ಡ್ ಕ್ಯಾಸ್ಟ್ ಮತ್ತು ಷೆಡ್ಯೂಲ್ಡ್ ಟ್ರೈಬ್ ಜನಗಳು ಕೋಮು ಗಲಭೆಗಳಲ್ಲಿ ನಷ್ಟಕ್ಕೆ ಒಳಗಾದರೆ ಅಂತಹವರಿಗೆ ಪರಿಹಾರ ಕೊಡಬೇಕೆಂದು ಕೋರ್ಟಿನಲ್ಲಿಯೇ ಆದೇಶಕೊಡುವ ಕಯೆದೆಯನ್ನು ಜಾರಿಗೆ ತರುತ್ತಿದ್ದೇವೆ.

ಶ್ರೀ ಜಿ. ಎಂ. ಕಾನಡೆ.—ಕೈ ಕಾಲು ಕಳೆದುಕೊಂಡವರಿಗೆ ಪರಿಹಾರ ಕೊಡಬೇಕಾಗುತ್ತದೆ. ಪೋಲೀಸ್ ಇಲಾಖೆಯಲ್ಲಿ ಸಿಬ್ಬಂದಿ ಕಡಿಮೆ ಇದೆ. ಆಲ್ಲಿರತಕ್ಕವರು ಒಳ್ಳೆಯ ಕೆಲಸ ಮಾಡಿದ್ದರೆ ಸಿ.ಓ.ಡಿ.ಗೆ ಹಾಕುತ್ತೀರಿ, ಅದಕ್ಕೋಸ್ಕರ ಅವರು ದರೋಡೆ ಪ್ರಕರಣಗಳಲ್ಲಿ ಕಳ್ಳರನ್ನು ಹಿಡಿಯುವುದಕ್ಕೆ ಹೋಗುವುದಿಲ್ಲ.

ಶ್ರೀ ಬಿ. ರಾಚಯ್ಯ.— ಸಿ.ಓ.ಡಿ.ಗೆ ಹಾಕುವವರೆಲ್ಲ ಅಧಿಕ್ಷರಲ್ಲ. ತಜ್ಞರು ದಕ್ಷರು ಇರುತ್ತಾರೆ. ಪೋಲೀಸ್ ಇಲಾಖೆಯಲ್ಲಿ ಒಂದೊಂದು ಭಾಗದಿಂದ ಒಂದೊಂದು ಭಾಗಕ್ಕೆ ವರ್ಗಮಾಡುವ ಪದ್ಧತಿ ಇದೆ ಅದರ ಪ್ರಕಾರ ವರ್ಗಾವಣೆ ಮಾಡುತ್ತೇವೆ

ಶ್ರೀಮತಿ ಕೆ.ಎಸ್. ನಾಗರತ್ನಮ್ಮ.—ಮಾನ್ಯ ಗೃಹ ಸಚಿವರಿಗೆ ಪ್ರಶ್ನೆ ಹಾಕಿದರೆ ಪೋಲೀಸ್ ಗಸ್ತು ತಿರುಗುವುದನ್ನು ಹೆಚ್ಚಿಸಲಾಗಿದೆ. ನಗರದ ಹೊರವಲಯದಲ್ಲಿ ಗಸ್ತು ತಿರುಗಲು ವಿಶೇಷ ಮೊಬೈಲ್ ದಳಗಳನ್ನು ನೇಮಿಸಲಾಗಿದೆ ಮತ್ತು ಸಿವಿಲ್ ಪೋಲೀಸರಿಗೆ ಸಶಸ್ತ್ರ ಪೋಲೀಸರ ನೆರವನ್ನು ಸಹ ಕೊಡಲಾಗಿದೆ. ಏಂದು ಮಾಮೂಲಾಗಿ ಉತ್ತರ ಕೊಡುತ್ತಾರೆ. ಇದೇ ಉತ್ತರ ಮುಂತ್ರಿಗಳು ಯಾವುದೇ ಪೇಳಿಕೆ ಕೊಟ್ಟರೂ ಇದ್ದೆ ಇರುತ್ತದೆ. ಬೆಳಿಗ್ಗೆ ಪತ್ರಿಕೆಯನ್ನು ಕೈಗೆತ್ತಿಕೊಂಡಾಗ ಇಂತಹದ್ದು ಏನಾದರೂ ಒಂದು ಸುದ್ದಿ ಇದ್ದೇ ಇರುತ್ತದೆ. ಹೊರವಲಯಗಳಲ್ಲಿರತಕ್ಕವರಿಗೆ ಇವೊತ್ತು ಎಲ್ಲಿ ದರೋಡೆಯಾಗಿದೆ, ಎಲ್ಲಿ ಲೂಟಿಯಾಗಿದೆ, ಎಲ್ಲಿ ಕೊಲೆಯಾಗಿದೆ ಎಂಬುದನ್ನು ನೋಡಬೇಕಾಗಿದೆ. ಆದರೆ, ಹೊರವಲಯದಲ್ಲಿರತಕ್ಕಂಥವರಿಗೆ ಬೆಳಿಗ್ಗೆ ಪೇಪರ್ ತೆಗೆದ ತಕ್ಷಣ ಹೆದರಿಕೆಯಾಗುತ್ತದೆ. ಇಷ್ಟಾದರೂ ಈ ಪ್ರಕಾರ ನಡೆಯುತ್ತಿರುವ ದರೋಡೆಗಳನ್ನು ನೋಡುತ್ತಿರುವಾಗ, ಇವುಗಳನ್ನು ತಡೆಗಟ್ಟಲು ಮಿಲಿಟರಿ ಸಹಾಯ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತೀರಾ ?

ಶ್ರೀ ಬಿ. ರಾಚಯ್ಯ.—ಮಾನ್ಯ ಅಧ್ಯಕ್ಷರೇ, ನಾನು ಕೆಲವು ಅಂಕಿ ಅಂಶಗಳನ್ನು ಸಭೆಗೆ ಕೊಡುವುದಕ್ಕೆ ತಮ್ಮ ಅಪ್ಪಣೆ ಕೋರುತ್ತೇನೆ. ೧೯೮೨ನೇ ಇಸವಿಯಲ್ಲಿ ಬೆಂಗಳೂರು ಸಿಟಿಯಲ್ಲಿ ಆದ ದರೋಡೆಗಳು ೭, ೧೯೮೩ ರಲ್ಲಿ ೮, ೧೯೮೪ರಲ್ಲಿ ೯, ೧೯೮೫ರಲ್ಲಿ ೫. ೧೯೮೬ರಲ್ಲಿ ೧೧ ಮತ್ತು ೧೯೮೭ರಲ್ಲಿ ೧ ಆಗಿದೆ. ಇದರಲ್ಲಿ ೯ ಪ್ರಕರಣಗಳಲ್ಲಿ ಪತ್ತೆ ಹಚ್ಚಲಾಗಿದೆ. ಇದೇ ರೀತಿ ಬೆಂಗಳೂರು ಡಿಸ್ಟ್ರಿಕ್ಟ್‌ನಲ್ಲಿ ಈ ಐದು ವರ್ಷಗಳಲ್ಲಿ ಕ್ರಮವಾಗಿ ೧,೧,೬,೩,೪ ದರೋಡೆಗಳು ನಡೆದಿದ್ದು ಈ ವರ್ಷ ಯಾವುದೂ ಇಲ್ಲ. ಒಂದು ಕೇಸ್ ಈಗಾಗಲೇ ಡಿಟೆಕ್ಟ್ ಆಗಿದೆ. ಆಮೇಲೆ ಬೆಳಗಾವಿಯಲ್ಲಿ ೮೫ರಲ್ಲಿ ಇಲ್ಲ, ೮೩ರಲ್ಲಿ ೫, ೮೪ರಲ್ಲಿ ೨, ೮೫ರಲ್ಲಿ ೪, ೮೬ರಲ್ಲಿ ೩ ಮತ್ತು ಈ ವರ್ಷ ೧ ಬಳ್ಳಾರಿಯಲ್ಲಿ ೮೩ರಲ್ಲಿ ೪, ೮೪ರಲ್ಲಿ ೩, ೮೫ರಲ್ಲಿ ೫, ೮೬ರಲ್ಲಿ ೫ ಮತ್ತು ೮೭ರಲ್ಲಿ ೨ ಆಗಿದೆ. ಬೀದರ್ ಡಿಸ್ಟ್ರಿಕ್ಟ್‌ನಲ್ಲಿ ೮೩ರಲ್ಲಿ ೫, ೮೫ರಲ್ಲಿ ೧, ೮೪ರಲ್ಲಿ ೩, ೮೫ರಲ್ಲಿ ಇಲ್ಲ, ೮೬ರಲ್ಲಿ ೧ ಮತ್ತು ೮೭ರಲ್ಲಿ ಯಾವುದೂ ಇಲ್ಲ. ಇವುಗಳಲ್ಲಿ ಒಂದನ್ನು ಈಗಾಗಲೇ ಡಿಟೆಕ್ಟ್ ಮಾಡಿದ್ದಾರೆ. ಬಿಜಾಪುರದಲ್ಲಿ ೮೨, ೮೩, ೮೪ರಲ್ಲಿ ಕ್ರಮವಾಗಿ ೧, ೨, ೩ ಮತ್ತು ೮೫ರಲ್ಲಿ ಇಲ್ಲ. ೮೬ರಲ್ಲಿ ೬ ಮತ್ತು ೮೭ರಲ್ಲಿ ೧ನ್ನು ಬಿಜಾಪುರದಲ್ಲಿ ಈಗಾಗಲೇ ಡಿಟೆಕ್ಟ್ ಮಾಡಿದ್ದಾರೆ. ಚಿಕ್ಕಮಗಳೂರಿನಲ್ಲಿ ಕ್ರಮವಾಗಿ ೨, ೪, ೧, ೫, ೩–೮೭ರಲ್ಲಿ ಇಲ್ಲ. ಚಿತ್ರದುರ್ಗದಲ್ಲಿ ೨, ೭, ೧, ೩, ೧, ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ೩ ಜನರನ್ನು ಹಿಡಿದಿದ್ದಾರೆ. ಧಾರವಾಡದಲ್ಲಿ ಈ ವರ್ಷ ೨. ೮೫ರಲ್ಲಿ ೫, ೮೪ರಲ್ಲಿ ೬, ೮೬ರಲ್ಲಿ ೬. ಈಗಾಗಲೇ ಕೆಲವರ ಮೇಲೆ ಕ್ರಮ ತೆಗೆದುಕೊಂಡಿದ್ದಾರೆ. ಆಮೇಲೆ ಹಾಸನದಲ್ಲಿ ೮೬ರಲ್ಲಿ ೧೨ ದರೋಡೆ ಪ್ರಕರಣಗಳು ನಡೆದಿದ್ದು ೧೨ ಕೇಸ್‌ಗಳನ್ನೂ ಕೂಡ ಡಿಟೆಕ್ಟ್ ಮಾಡಿದ್ದಾರೆ. ಕೊಡಗು ಜಿಲ್ಲೆಯಲ್ಲಿ ೮೨ ಮತ್ತು ೮೩ರಲ್ಲಿ ತಲಾ ಒಂದೊಂದು ಪ್ರಕರಣಗಳು ನಡೆದಿದೆ. ಅಲ್ಲಿಂದೀಚೆಗೆ ಯಾವುದೂ ಇಲ್ಲ. ಕೋಲಾರ ಜಿಲ್ಲೆಯಲ್ಲಿ ಇಬ್ಬರನ್ನು ಹಿಡಿದಿದ್ದಾರೆ. ಪೂರ್ಣ ವಿವರ ಬಂದಿಲ್ಲ. ಕೆ.ಜಿ.ಎಫ್ ನಲ್ಲಿ ೧ ಆಗಿದೆ. ಮಂಡ್ಯದಲ್ಲಿ ೮೨, ೮೩ ಮತ್ತು ೮೫ ರಲ್ಲಿ ತಲಾ ಒಂದೊಂದು ಪ್ರಕರಣ ನಡೆದಿದೆ, ಮೈಸೂರಿನಲ್ಲಿ ಕ್ರಮವಾಗಿ ೨, ೧, ೨, ೫, ೨ ಆಗಿದೆ. ರಾಯಚೂರಿನಲ್ಲಿ ಕ್ರಮವಾಗಿ ೧, ೧, ೩, ೩, ೫, ಆಗಿದೆ. ೮೭ರಲ್ಲಿ ಯಾವುದೂ ಇಲ್ಲ. ಆಮೇಲೆ ರೈಲ್ವೆಸ್ ನಲ್ಲಿ ೧ ಆಗಿದೆ ಶಿವಮೊಗ್ಗದಲ್ಲಿ ೧,೧,೩,೧, ಆಗಿದೆ ತುಮಕೂರುನಲ್ಲಿ ೯,೧,೨,೫,೧. ಆಗಿದೆ, ೮೭ನೇ ಇಸವಿಯಲ್ಲಿ ಒಟ್ಟು ೧೪ ಕೇಸುಗಳಲ್ಲಿ ೨ನ್ನು ಡಿಟೆಕ್ಟ್ ಮಾಡಿದ್ದಾರೆ. ೮೬ ರಲ್ಲಿ ಒಟ್ಟು ೭೫ ಕೇಸುಗಳಲ್ಲಿ ೨೪ ಕೇಸುಗಳನ್ನು ಡಿಟೆಕ್ಟ್ ಮಾಡಿದ್ದಾರೆ. ಈ ವಿವರಗಳನ್ನು ನೋಡಿದಾಗ, ಈ ತರಹ ದರೋಡೆ ಮತ್ತು ಲೂಟಿ ಆಗತಕ್ಕಂಥ ಸಂದರ್ಭಗಳಲ್ಲಿ ಬೆಂಗಳೂರು ನಗರದ ಹೊರಗಡೆ ಬರತಕ್ಕವರು, ಹೋಗತಕ್ಕವರು ಇರುತ್ತಾರೆ. ಈಗ ಇರತಕ್ಕಂಥ ಪೋಲೀಸರನ್ನೇ ಉಪಯೋಗಿಸಿಕೊಂಡು ಇನ್ನೂ ಹೆಚ್ಚಿನ ನಿಗಾ ಇಟ್ಟುಕೊಂಡು ಹತ್ತೆ ಮಾಡುವ ಕೆಲಸ ಮತ್ತು ದರೋಡೆಗಳು ಆಗದ ಹಾಗೆ ಪ್ರಯತ್ನ ಮಾಡುತ್ತಿದ್ದೇವೆ. ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಕೇಸುಗಳು ಡಿಟೆಕ್ಟ್ ಆದರೆ ಅದರ ವಿವರಗಳನ್ನು ಸಭೆಯ ಮುಂದೆ ತರುತ್ತೇನೆ.

ಶ್ರೀಮತಿ ರೇಖಾದೇವಿ ಆರ್. ಪ್ರಸಾದ್.—ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು.—ಬೇರೆಯವರಿಗೆ ಅವಕಾಶ ಇಲ್ಲ. ನೀವು ಕುಳಿತುಕೊಳ್ಳಿ.

ಶ್ರೀ ಜೆ. ನಾರಾಯಣಸ್ವಾಮಿ.—ಬೂಸಾ ಬಸವಲಿಂಗಪ್ಪನವರು ನಾನಿಲ್ಲದಿದ್ದಾಗ ಕನ್ನಡಕ್ಕೆ ಅವಮಾನ ಮಾಡಿದ್ದಾರೆ. ಇವರು ಬೂಸಾ ಮುಂತ್ರಿ ಬಸವಲಿಂಗಪ್ಪ ಹಿಂದೆ ಇವರು ಕನ್ನಡದ ಸಾಹಿತ್ಯವನ್ನು ಬೂಸಾ ಸಾಹಿತ್ಯವೆಂದು ಹೇಳಿದ್ದನ್ನು ಪ್ರತಿಭಟಿಸಿ ವಿದ್ಯಾರ್ಥಿಗಳು ಚಳುವಳಿ ಮಾಡಿದ್ದನ್ನು ಇವರು ಮರೆತುಬಿಟ್ಟಿರೇ ? ಇವರಿಗೆ ಅರಳು ಮರಳೇನು ?

(ಗೊಂದಲ)

ಶ್ರೀ ಬಿ. ಬಸವಲಿಂಗಪ್ಪ. —ಅಧ್ಯಕ್ಷರೇ, ಇದಕ್ಕೆ ನಾನು ಏನು ಹೇಳಬೇಕು ?

ಅಧ್ಯಕ್ಷರು. —ನೀವಿಬ್ಬರೂ ಕುಳಿತುಕೊಳ್ಳಿ.

ಶ್ರೀ ಬಿ. ಬಸವಲಿಂಗಪ್ಪ.—ಅವರು ಏನು ಬೇಕಾದರೂ ಮಾತನಾಡುವುದಕ್ಕೆ ತಾವು ಅವಕಾಶ ಕೊಟ್ಟರೆ ಹೇಗೆ ?

ಅಧ್ಯಕ್ಷರು.—ಯಾರೂ ನಡುವೆ ಎದ್ದು ಇದ್ದಕ್ಕಿದ್ದ ಹಾಗೆ ಎದ್ದು ನಿಂತು ಮಾತನಾಡಬಾರದು.

(ಗೊಂದಲ)

ಸವಣೂರಿನಲ್ಲಿನ ಸರ್ಕಾರಿ ಆಸ್ಪತ್ರೆ

೧೪೫ (೫೦೨) ಶ್ರೀ ನೀಲಕಂಠಗಾವ ಪಾಟೀಲ್ (ಶಿಗ್ಗಾಂವ್).—ಮಾನ್ಯ ಆರೋಗ್ಯ ಹಾಗೂ ಅಬ್ಕಾರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಸವಣೂರಿನಲ್ಲಿರುವ ಸರಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೇರಿಸುವ ವಿಚಾರ ಸರಕಾರ ದವರ ಗಮನದಲ್ಲಿದೆಯೇ ?

ಆ) ಸದರಿ ಆಸ್ಪತ್ರೆಯಲ್ಲಿ ಹಿರಿಯ ವೈದ್ಯಾಧಿಕಾರಿಗಳ ಸ್ಥಳ ಮತ್ತು ಇತರೇ ಮಹಿಳಾ ವೈದ್ಯಾಧಿಕಾರಿಗಳ ಸ್ಥಳ ಸುಮಾರು ಆರು ತಿಂಗಳಿಂದ ಖಾಲಿ ಇರುವುದು ಸರಕಾರದವರ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ, ಖಾಲಿ ಸ್ಥಾನಗಳನ್ನು ಯಾವಾಗ ತುಂಬಲಾಗುವುದು ?

ಶ್ರೀ ಹೆಚ್. ಟಿ. ಕೃಷ್ಣಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು), —

ಅ) ಇದೆ.

ಆ) 'ಎ' ದರ್ಜೆಯ ಕಿರಿಯ ಆರೋಗ್ಯ ಅಧಿಕಾರಿಗಳ ಹುದ್ದೆ ಖಾಲಿ ಇದೆ. ಒಬ್ಬ ಮಹಿಳಾ ವೈದ್ಯಾಧಿಕಾರಿಣಿಯು ಇಲ್ಲಿ ಕೆಲಸ ಮಾಡುತ್ತಿರುತ್ತಾರೆ. ಆದರೆ, ಗೈನಕಾಲಜಿಸ್ಟ್ ತಜ್ಞ ವೈದ್ಯರ ಹುದ್ದೆ ಖಾಲಿ ಇದೆ.

ಇ) ಸಾಧ್ಯವಾದಷ್ಟು ಶೀಘ್ರದಲ್ಲಿ

ಶ್ರೀ ನೀಲಕಂಠಗೌಡ ವೀರಣ್ಣಗೌಡ ಪಾಟೀಲ್.—ಮಾನ್ಯ ಅಧ್ಯಕ್ಷರೇ, ಸವಣೂರಿನಲ್ಲಿರುವ ಸರ್ಕಾರಿ ಆಸ್ಪತ್ರೆಯನ್ನು ಮೇಲ್ದರ್ಜೆಗೆ ಏರಿಸುವ ವಿಚಾರ ಸರ್ಕಾರದವರ ಗಮನದಲ್ಲಿದೆಯೇ ಎಂದು ಕೇಳಿರುವುದಕ್ಕೆ "ಹೌದು ಇದೆ" ಎಂದು ಹೇಳಿದ್ದಾರೆ. ಹಾಗಾದರೆ ಯಾವಾಗ ಮೇಲ್ದರ್ಜೆಗೆ ಏರಿಸುತ್ತೀರಿ ಎಂಬುದನ್ನು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಅಧ್ಯಕ್ಷರೇ, ಇದುವರೆಗೂ ಸವಣೂರು ಆಸ್ಪತ್ರೆ ೨೪ ಹಾಸಿಗೆಗಳುಳ್ಳ ಒಂದು ಆಸ್ಪತ್ರೆಯಾಗಿತ್ತು. ೩೦ ಹಾಸಿಗೆಗಳ ಆಸ್ಪತ್ರೆಯನ್ನಾಗಿ ಪರಿವರ್ತನೆ ಮಾಡಬೇಕೆಂದು ಐ.ಪಿ.ಪಿ. ಯೋಜನೆ ಕೆಳಗೆ ಇದನ್ನು ಕೈಗೆತ್ತಿಕೊಂಡಿದ್ದೇವೆ.

ಶ್ರೀ ನೀಲಕಂಠಗೌಡ ವೀರಣ್ಣಗೌಡ ಪಾಟೀಲ್.—ನನ್ನ ಎರಡನೆಯ ಪ್ರಶ್ನೆ, ಡಿಪ್ಲೊಮಾ ಸರ್ಜನ್ಸ್ ಹುದ್ದೆಯು ಕಳೆದ ೬ ತಿಂಗಳಿಂದ ಖಾಲಿ ಇದೆ. ಈ ಪೋಸ್ಟನ್ನು ಯಾವಾಗ ತುಂಬಿಕೊಡುತ್ತೀರಿ ?

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಸ್ವಾಮಿ, ಅಲ್ಲಿ ಒಬ್ಬರು ಎ. ದರ್ಜೆ ನೌಕರರು ಇದ್ದದ್ದು ನಿಜ. ಅವರನ್ನು ಬೇರೆ ಕಡೆಗೆ ವರ್ಗ ಮಾಡಿದ್ದರಿಂದ ಆ ಜಾಗ ಖಾಲಿ ಇದೆ. ಇಂತಹ ಜಾಗಗಳನ್ನು ಭರ್ತಿ ಮಾಡಲು ಅರ್ಹರಾದಂತಹವರಿಗೆ ಬಡ್ತಿ ಕೊಟ್ಟು, ಅಲ್ಲಿನ ಖಾಲಿ ಜಾಗಕ್ಕೆ ನೇಮಕ ಮಾಡುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ.—ಮಾನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿ ತಯಾರಾಗತಕ್ಕಂಥ ಎಲ್ಲಾ ಕನ್ನಡ ಚಲನಚಿತ್ರಗಳಿಗೂ ಕೂಡಾ ಸಬ್ಸಿಡಿ ಕೊಡಲಾಗಿದೆ, ಕೊಡಲಾಗುತ್ತಿದೆ ಎಂದು ಮಾನ್ಯ ಮುಖ್ಯ ಮಂತ್ರಿಗಳು ಉತ್ತರ ಕೊಟ್ಟಿದ್ದಾರೆ. ಸಾಹಿತ್ಯ ಇಲ್ಲ, ಕಲೆ ಇಲ್ಲ, ಕಥೆ ಇಲ್ಲ – ಇವುಗಳಿಲ್ಲದ ಕನ್ನಡ ಚಲನಚಿತ್ರಗಳೂ ಕೂಡಾ ಬೇಕಾದಷ್ಟು ಬರುತ್ತಿವೆ. ಈ ಚಿತ್ರಗಳಿಗೆ ಸಾರ್ವಜನಿಕರ ಹಣವನ್ನು ಕೊಡುವುದರಿಂದ, ಕನ್ನಡಕ್ಕಾಗಲೀ, ಕನ್ನಡ ಚಲನಚಿತ್ರರಂಗವಾಗಲೀ ಬೆಳೆಯುವುದಕ್ಕೆ ಸಾಧ್ಯವಾಗುತ್ತದೆಯೇ ಎಂಬುದು ಒಂದು ಪ್ರಶ್ನೆ. ಎರಡನೆಯದು, ಸಬ್ಸಿಡಿ ಕೊಡುವಾಗ, ಸಾಮಾಜಿಕ